**ಅಸಲು ದಾವ ಸಂಖ್ಯೆಃ 463/2018**
**ಡಿ.ಡಬ್ಲೂ -1**

ದಿಃ03.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎಸ್ ಜಿ ಕೆ ರವರಿಂದಃ-**

1. ನಿಶಾನೆ ಡಿ 15ಎ ನ್ನು ನನಗೆ ಅನುಕೂಲವಾಗುವಂತೆ ತಪ್ಪಾಗಿ ಅನುವಾದಿಸಿ ಹಾಜರುಪಡಿಸಿದ್ದೇನೆ ಎಂದರೆ ನಾನು ಅನುವಾದಕರೂ ನೀಡಿದಂತೆ ಹಾಜರುಪಡಿಸಿರುತ್ತೇನೆ. ನನಗೆ ಇಂಗ್ಲೀಷ ಮತ್ತು ಮರಾಠಿ ನ್ನು ಓದಲು ಬರುವುದಿಲ್ಲ. ಸದರಿ ನಿಶಾನೆ ಡಿ 15ಎ ನ್ನು ತಯಾರಿಸುವಂತೆ ಅನುವಾದಕರನ್ನು ನಾನೇ ಕೋರಿರುತ್ತೇನೆ. ನಾನು ಸರ್ವೇ ನಂಬರ 81 ರಲ್ಲಿ ಮನೆ ಕಟ್ಟಿದ್ದೇನೆ ಎಂದು ತೋರಿಸಲು ನ್ಯಾಯಾಲಯದಲ್ಲಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಶಾನೆ ಡಿ 72ನ್ನು ಅನುವಾದಿಸುವಂತೆ ನಾನೇ ಅನುವಾದಕರಲ್ಲಿ ಕೋರಿ ನಿಶಾನೆ ಡಿ 72ಎ ನ್ನು ಪಡೆದಿರುತ್ತೇನೆ. ನಿಶಾನೆ ಡಿ 72 ರನ್ವಯ ಖರೀದಿ ಪತ್ರ ಎಷ್ಟು ಅವಧಿಯಲ್ಲಿ ಮಾಡಕೊಳ್ಳಬೇಕೆಂದು ಸದರಿ ದಾಖಲೆಯಲ್ಲಿ ನಮೂದು ಮಾಡಿರಲಿಲ್ಲ. ನಿಶಾನೆ ಡಿ 72 ನ್ನು ಮಾಡಿಕೊಳ್ಳುವಾಗ ಖರೀದಿ ಪತ್ರ ಮಾಡಿಕೊಳ್ಳಲು ನನಗೆ ಯಾವುದೇ ಅಡಚಣೆ ಇರಲಿಲ್ಲ. ಸದರಿ ನಿಶಾನೆ ಡಿ 72 ರಲ್ಲಿ ಖರೀದಿ ಪತ್ರ ಮಾಡಿಕೊಳ್ಳುವಾಗ ಸರ್ಕಾರದಿಂದ ಪರವಾಣಿಗೆ ಪಡೆದುಕೊಳ್ಳಬೇಕು ಹಾಗೂ ಪರವಾನಿಗೆ ಖರ್ಚುವೆಚ್ಚಗಳನ್ನು ನಾನೇ ನೋಡಿಕೊಳ್ಳಬೇಕು ಎಂದು ಬರೆದಿತ್ತು. ನಾನು ಸದರಿ ಪರವಾನಿಗೆ ಖರ್ಚನ್ನು ಭರಿಸಲು ಸಿದ್ದನಿದ್ದೇನೆ ಹಾಗೂ ನನಗೆ ಖರೀದಿ ಪತ್ರ ಬರೆದುಕೊಡಿ ಎಂದು ನನ್ನ ಖರೀದಿದಾರರಿಗೆ ನಾನು ಇಲ್ಲಿಯವರೆಗೂ ನೋಟಿಸ ನೀಡಿಲ್ಲ ಎಂದರೆ ಸರಿ. ನಾನು ಯಾವುದೇ ಖರೀದಿ ಪತ್ರ ಮಾಡಿಕೊಳ್ಳದೇ ಇರುವುದರಿಂದ ನನಗೆ ಮಾಲ್ಕಿ ಹಕ್ಕು ಇರುವುದಿಲ್ಲ ಎಂದರೆ ಸರಿ. ನಾನು ಕಲ್ಲಪ್ಪ ಪಾಟೀಲ ರವರ ವಿರುದ್ದವಾಗಲೀ ಅಥವಾ ವಾದಿಯರ ವಿರುದ್ದವಾಗಲೀ ಯಾವುದೇ

ದಾವೆಯನ್ನು ಸಲ್ಲಿಸಿಲ್ಲ ಎಂದರೆ ಸರಿ.  ನಿಶಾನೆ ಡಿ 72 ರಲ್ಲಿ ಉಲ್ಲೇಖಿಸಿರುವ ಪರವಾನಿಗೆ ಯಾವ ರೀತಿಯ ಪರವಾನಿಗೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಇಲ್ಲಿಯವರೆಗೂ ಅದನ್ನು ಚೌಕಶಿ ಮಾಡಿರುವುದಿಲ್ಲ.  ನಿಶಾನೆ ಡಿ 16 ರಲ್ಲಿ ಏನಾದರೂ ತಪ್ಪು ಇದಯೋ ಇಲ್ಲವೋ ಎಂದು ಹೇಳಲು ಬರುವುದಿಲ್ಲ. ನಾನು ನಿಶಾನೆ ಡಿ 16 ರಲ್ಲಿ ತಪ್ಪು ಎಂಟ್ರಿ ಇದೆ ಎಂದು ಯಾವುದೇ ಅರ್ಜಿಯನ್ನು ಗ್ರಾಮಪಂಚಾಯತಿ ನೀಡಿಲ್ಲ. ನಾನು ಮನೆಯನ್ನು UN-authorised ಕಟ್ಟಿದ್ದೇನೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದು, ಈ ರೀತಿ un-authorised ಮನೆಗೆ  ದಂಡವನ್ನು ಭರಿಸಿಕೊಳ್ಳಬೇಕು ಎಂದು ನಾನು ಪಂಚಾಯತಿಗೆ ಅರ್ಜಿ ನೀಡಿಲ್ಲ. ನಾನು unauthorised ಆಗಿ ಮನೆಯನ್ನು ಕಟ್ಟಿದ್ದೇನೆ ಎಂದು ಪಂಚಾಯತಿಗೆ ದಂಡವನ್ನು ಭರಿಸಿಲ್ಲ ಎಂದರೆ ಸರಿ. 1986 ನೇ ಇಸ್ವಿಯಲ್ಲಿ ನನ್ನ ಮನೆಯನ್ನು ದಾವಾ ಆಸ್ತಿಯಲ್ಲಿ ಕಟ್ಟಿದ್ದೇನೆ ಎಂಬ ಕುರಿತಾಗಿ ಸರ್ವೇಯನ್ನು ಮಾಡಿಲ್ಲ. ನನಗೆ ಮನೆಯನ್ನು ಕಟ್ಟಲು ಗ್ರಾಮಪಂಚಾಯತಿಯಲ್ಲಿ ಪರವಾನಿಗೆಯನ್ನು ನೀಡಿಲ್ಲ ಎಂದರೆ ಸರಿ.  ದಾವಾ ಆಸ್ತಿಯ ದಕ್ಷಿಣಕ್ಕೆ ಡಾಂಬರ ರಸ್ತೆ ಇರುತ್ತದೆ.  ಉತ್ತರಕ್ಕೆ ಕಲ್ಪತ್ರಿ ರವರ ಮನೆ ಇರುತ್ತದೆ ಎಂದರೆ ಅದು ಪೂರ್ವಕ್ಕೆ ಇರುತ್ತದೆ. ದಾವಾ ಆಸ್ತಿಯ ಪೂರ್ವಕ್ಕೆ ಸಂಜಯ ಬಾಬು ಕಾಂಬಳೆ ರವರ ಜಾಗ ಇರುತ್ತದೆ ಎಂದರೆ ಸರಿಯಲ್ಲ.  ದಾವಾ ಆಸ್ತಿಯ ಪಶ್ಚಿಮಕ್ಕೆ ಶಂಕರ ಪಾಟೀಲ ರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ, ದಾವಾ ಆಸ್ತಿಯ ಪಶ್ಚಿಮಕ್ಕೆ ನಾರಾಯಣ ಪಾಟೀಲ ರವರ ಜಮೀನು ಇರುತ್ತದೆ. ದಾವಾ ಆಸ್ತಿಯ ಪಿಟಿಶೀಟ್ ನಲ್ಲಿ ದಕ್ಷಿಣ ದಿಕ್ಕಿಗೆ ರಸ್ತೆಯನ್ನು ತೋರಿಸಿಲ್ಲ ಎಂದರೆ ಪಂಚಾಯತಿಯವರು ರಸ್ತೆಯನ್ನು ಮಾಡಿಸಿರುತ್ತಾರೆ.  ದಾವಾ ಆಸ್ತಿಯಲ್ಲಿ ಸ್ವಲ್ಪ ಜಾಗವನ್ನು ಗ್ರಾಮಪಂಚಾಯತಿಯವರು ರಸ್ತೆ ಉದ್ದೇಶಕ್ಕಾಗಿ ಬಳಸಿಕೊಂಡಿರುತ್ತಾರೆ. ಸದರಿ ಈ ರೀತಿ ಗ್ರಾಮಪಂಚಾಯತಿಯವರು ರಸ್ತೆ ಉದ್ದೇಶಕ್ಕಾಗಿ ಬಳಸಿಕೊಂಡಿರುವ ಜಾಗದ ವಿಸ್ತೀರ್ಣ 380 ಪೀಟ್ ಅಜಮಾಸ ಇರಬಹುದು.  ಈ ರೀತಿ ನಾನು ಗ್ರಾಮಪಂಚಾಯತಿಯವರು ರಸ್ತೆ

ಉದ್ದೇಶಕ್ಕಾಗಿ ದಾವಾ ಆಸ್ತಿಯ ಜಾಗವನ್ನು ಬಳಸಿಕೊಂಡಿದ್ದಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿಲ್ಲ ಹಾಗೂ ನ್ಯಾಯಾಲಯದಲ್ಲಿ ಮೊದಲನೇ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಕರನಕ್ಷೆಯಲ್ಲಿ ಸಹ ದಾವಾ ಆಸ್ತಿಯ 380 ಪೀಟ್ ಜಾಗವನ್ನು ಬಳಸಿಕೊಂಡಿದ್ದಾರೆ ಎಂದು ತೋರಿಸಿಲ್ಲ. ನನಗೆ ಸದರಿ 380 ಪೀಟ್ ಜಾಗದ ವಿಸ್ತೀರ್ಣದ ಉದ್ದ ಅಗಲವನ್ನು ಹೇಳಲು ಬರುವುದಿಲ್ಲ. ಪ್ರತಿವಾದ ಪತ್ರದ ಕರನಕ್ಷೆಯನ್ನು ನನ್ನ ಪ್ರತಿರಕ್ಷೆಗೆ ಅನುಕೂಲವಾಗಲಿ ಎಂದು ಸುಳ್ಳಾಗಿ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಕರನಕ್ಷೆಯನ್ನು ಪಿಡಿಓ ಗ್ರಾಮಪಂಚಾಯತಿಯವರು ಹೇಳಿದ ಪ್ರಕಾರ ತಯಾರಿಸಿರುತ್ತೇನೆ. ಸದರಿ ಪಿಡಿಓ ರವರ ಹೆಸರು ನನಗೆ ಹೇಳಲು ಬರುವುದಿಲ್ಲ. ಪಿಡಿಓ ಗ್ರಾಮಪಂಚಾಯವರು ಹೇಳಿದಂತೆ ಶನಿವಾರಕೂಟದಲ್ಲಿ ಪ್ರತಿವಾದ ಪತ್ರದ ಕರನಕ್ಷೆಯನ್ನು ತಯಾರಿಸಿದ್ದೇವೆ. ಪ್ರತಿವಾದ ಪತ್ರ ಕರನಕ್ಷೆಯನ್ನು ಪ್ರತಿರಕ್ಷೆಗೆ ಅನುಕೂಲವಾಗಲೀ ತಪ್ಪಾಗಿ ತಯಾರಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸರ್ವೇ ನಂಬರ 22/2 ರಲ್ಲಿ ಯಾವುದೇ ಮನೆಯನ್ನು ಕಟ್ಟದಿದ್ದರೂ ಸಹ ದಾವೆಗೆ ಅನಕೂಲವಾಗಲೀ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದ ಪತ್ರ ಕರನಕ್ಷೆಯಲ್ಲಿ ರಸ್ತೆಗೆ ಜಾಗವನ್ನು ಬಿಟ್ಟಿದ್ದೇನೆ ಎಂದು ತೋರಿಸಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ವಾದಿಯರೇ ಕಬ್ಜಾವಹಿವಾಟಿನಲ್ಲಿದ್ದರೂ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸರ್ವೇ ನಂಬರನಲ್ಲಿ ಯಾವುದೇ ಮನೆಯನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ ಸರಿಯಿದೆ.

ಸಹಿ/-

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಬೆಳಗಾವಿ.